## ಸಾಧನೆ

# 'ಲಿಮ್ಕಾ' ದಾಖಲೆಯತ್ತ ಗೌತಮ್



ಸಾಹಸ- ಸಾಧನೆ ಎನ್ನುವುದು ಕೆಲವರಿಗೆ ಹವ್ಯಾಸ, ಕೆಲವರಿಗೆ ಕುತೂಹಲ, ಆಸಕ್ತಿ, ಇನ್ನೂ ಕೆಲವರಿಗೆ ಹುಡುಗಾಟಿಕೆ, ಬೆಂಗಳೂರಿನ ಯುವಕ ಗೌತಮ್‌ಗೆ 'ಲಿಮ್ಕಾ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್'ನಲ್ಲಿ ಹೇಗಾದರೂ ಮಾಡಿ ತಮ್ಮ ಹೆಸರು ಸೇರಿಸಬೇಕು ಎಂಬ ತವಕ. ಇದಕ್ಕಾಗಿ ಅವರು ಕಂಡುಕೊಂಡದ್ದು ವಿಭಿನ್ನ ಜಾದೂ. ಅದೇ ಕೋಕ ಕೋಲ ಬಾಟಲಿ ಮೇಲೆ ಕೀಬೋರ್ಡ್ ಇಟ್ಟು ಬ್ಯಾಲೆನ್ಸ್ ಮಾಡುತ್ತಾ ಕಣ್ಣಿಗೆ ಬಟ್ಟೆ ಕಟ್ಟಿ ನಿರಂತರವಾಗಿ 15 ನಿಮಿಷ ಟೈಪ್ ಮಾಡೋದು. ಇದು ವಿಚಿತ್ರ ಎನಿಸಿದರೂ ಇದರ ಹಿಂದಿನ ಶ್ರಮ ಕುತೂಹಲಕಾರಿ ಆದದ್ದು.

ಹಾಗೆ ನೋಡಿದರೆ, ಗೌತಮ್ ವೃತ್ತಿಯಲ್ಲಿ ಬೆಂಗಳೂರು ಮೆಡಿಕಲ್ ಸೆಂಟರ್‌ನ ನೌಕರ. ಓದಿದ್ದು ಇತಿಹಾಸ ವಿಷಯದಲ್ಲಿ ಎಂಎ ಪಿಜಿಡಿಸಿಎ. ಉಪ ಜೀವನಕ್ಕಾಗಿ ಆರಂಭಿಸಿದ್ದು ಕಂಪ್ಯೂಟರ್ ಸೆಂಟರ್. 2000ನೇ ಇಸವಿಯಲ್ಲಿ ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ ಕಂಪ್ಯೂಟರ್ ಸೆಂಟರ್ ತೆರೆದ ಗೌತಮ್, ಎರಡು ವರ್ಷ ಇದನ್ನು ಮುನ್ನಡೆಸಿದರು. ನಂತರ 2002ರಲ್ಲಿ ಕ್ರಿಯೇಟಿವ್ ಆಗಿ ಏನಾದರೂ ಮಾಡಬೇಕು ಎಂಬ ಯೋಚನೆ ಬಂತು. ಆಗ ಅವರಿಗೆ ಥಟ್ಟನೆ ಹೊಳೆದದ್ದು ಕಂಪ್ಯೂಟರ್ ಕೀಬೋರ್ಡ್ ಕೆಳಗೆ ಕೋಕ ಕೋಲ ಬಾಟಲಿ ಇಟ್ಟು ನಿರಂತರವಾಗಿ 30 ನಿಮಿಷ ಟೈಪ್ ಮಾಡೋದು. ಇದನ್ನು ಅಭ್ಯಾಸ ಮಾಡಿಕೊಂಡ ಇವರು ಲಿಮ್ಕಾ ಬುಕ್ ಆಫ್ ರೆಕಾರ್ಡ್‌ಗೆ ಸೇರುವಷ್ಟು ಪಳಗಿದರು. ನಂತರ ಇದೇ ಚಮತ್ಕಾರವನ್ನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ತಾಲೀಮು ನಡೆಸಿದರು. ನಾಲ್ಕು ವರ್ಷ ಅಭ್ಯಾಸ ಮಾಡಿದ ಬಳಿಕ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು 15 ನಿಮಿಷ ನಾನ್‌ಸ್ಟಾಪ್ ಟೈಪಿಂಗ್ ಮಾಡಿದರು. 'ಟೈಪ್ ಮಾಡುವ ವಿಷಯ ಏನು' ಎಂಬ ಪ್ರಶ್ನೆಗೆ 'ವಾಕ್‌ಮನ್‌ನಲ್ಲಿ ಟೆಕ್ಸ್ಟ್ ರೆಕಾರ್ಡ್ ಮಾಡಿ ಹೆಡ್‌ಫೋನ್ ಅನ್ನು ಹಾಕಿಕೊಂಡು ಟೆಕ್ಸ್ಟ್ ಕೇಳ್ತಾ ಟೈಪ್ ಮಾಡೋದು' ಎನ್ನುತ್ತಾರೆ ಗೌತಮ್. ಇದು ಸಹ ಲಿಮ್ಕಾ ಬುಕ್‌ಆಫ್ ವರ್ಲ್ಡ್ ರೆಕಾರ್ಡ್‌ನಲ್ಲಿ ಹೊಸ ದಾಖಲೆಯಾಯಿತು. 'ಇನ್ನು ಇದನ್ನೇ ಗಿನ್ನೆಸ್ ಬುಕ್ ದಾಖಲೆಗೆ ಕೊಂಡೊಯ್ಯುವ ಮನಸ್ಸು ಇದೆ. ಈ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ' ಎನ್ನುತ್ತಾರೆ ಅವರು.

ಕರಾಟೆಯಲ್ಲಿ ಬ್ಲ್ಯಾಕ್‌ಬೆಲ್ಟ್ ಆಗಿರುವ ಗೌತಮ್ ಎರಡು ಸಲ ರಾಜ್ಯಮಟ್ಟದಲ್ಲಿ ಚಿನ್ನದ ಪದಕ ವಿಜೇತರೂ ಹೌದು. ಗೌತಮ್ ಅವರ ಸಂಪರ್ಕಕ್ಕೆ: 9886019394/ 8722989303.

★ ಅವನೀಶ್

### ಲಿಮ್ಕಾ ದಾಖಲೆ

ಯಾವುದೇ ಕ್ಷೇತ್ರದಲ್ಲಿ ವಿಭಿನ್ನ ಸಾಧನೆ ಮಾಡಿದ್ದನ್ನು ದಾಖಲಿಸುವ ಸಲುವಾಗಿ ಭಾರತದಲ್ಲಿ ಸ್ಥಾಪಿಸಲಾದ ದಾಖಲೆಗಳ ಸಂಗ್ರಹ ಪುಸ್ತಕವೇ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್'. ಇದು ಮೊದಲ ಬಾರಿಗೆ 1990ರಲ್ಲಿ ಪ್ರಕಟವಾಯಿತು. ನಂತರ ಪ್ರತೀ ವರ್ಷ ಕೋಕ-ಕೋಲ ಲಿಮ್ಕಾ ಬ್ರಾಂಡ್‌ನಡಿಯಲ್ಲಿ ಈರೆಕಾರ್ಡ್ ಬುಕ್ ಅನ್ನು ಪ್ರಕಟಿಸುತ್ತಾ ಬಂದಿದೆ. ಲಿಮ್ಕಾ ಬುಕ್‌ನ 20ನೇ ಆವೃತ್ತಿಯನ್ನು ಬಾಲಿವುಡ್ ಬಿಗ್‌ಬಿ ಅಮಿತಾಬಚ್ಚನ್ 2009ರಲ್ಲಿ ಬಿಡುಗಡೆ ಮಾಡಿದ್ದರು.

ಲಿಮ್ಕಾ ಬುಕ್‌ನ ಸದ್ಯದ ಸಂಪಾದಕರು ವಿಜಯ ಘೋಷ್. 2007ರಲ್ಲಿ ಭಾರತ ಸ್ವಾತಂತ್ರ್ಯದ 60ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಲಿಮ್ಕಾ ವಿಶೇಷ ಸಂಚಿಕೆಯನ್ನು ಪ್ರಕಟಿಸಿತು.






ಬರೀ ಎ.ಸಿ. ಇದೆ, ಫ್ಯಾನ್ ಇಲ್ಲ! ನೀನು ಹಾಕೋತೀನಿ ಅಂತೆ ನಿನ್ನ ಹೆದರಿಸೋಕಾಗಲ್ಲ. ಬೇರೆ ಬಾಡಿಗೆ ಮನೆ ಹುಡುಕು.!




ಉಳಿದೆಲ್ಲ ಬಿಟ್ಟು ರಾಜಕೀಯ ಸೇರ್‍ತೀನಿ ಅಂತಿದ್ದಾನೆ. ಅದ್ಕೆ ನಟನೆಯೂ ಗೊತ್ತಿದ್ರೆ ಅನುಕೂಲ ಅಂತ..?




ಈರುಳ್ಳಿಯನ್ನು ಸೇಫ್‌ಲಾಕರ್‌ನಲ್ಲಿ ಇಟ್ಕೊಳ್ಳೊ ವ್ಯವಸ್ಥೆ ನಿಮ್ಮ ಬ್ಯಾಂಕಲ್ಲಿ ಇದೆಯಾ.. ಸಾರ್..?